## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ.ಪಿ. ನಂಜುಂಡಿ ವಿಶ್ವಕರ್ಮ ಇವರು ನಿಯಮ-72ರಡಿಯಲ್ಲಿ ಗಮನ ಸೆಳೆದಿರುವ ಸೂಚನೆಗೆ ಉತ್ತರ.

********

**ವಿಷಯ:**

**1977ರಲ್ಲಿ ಹಾವನೂರು ಆಯೋಗವು ವಿಶ್ವಕರ್ಮ ಸಮಾಜದ ಕುಲಶಾಸ್ತ್ರೀಯ ಅಧ್ಯಯನವನ್ನು ನಡೆಸಿದ್ದಲ್ಲಿ, ವೃತ್ತಿ ಆಧಾರಿತವಾಗಿ ಜಾತಿಯಲ್ಲದವರನ್ನು ಉಪಜಾತಿಗಳನ್ನಾಗಿ ಆಯ್ಕೆ ಮಾಡುವ ಬದಲು ಪ್ರತ್ಯೇಕ ಜಾತಿಗಳನ್ನಾಗಿ ವಿಂಗಡಿಸದಿರಲು ಕಾರಣಗಳೇನು; ದೈವಜ್ಞ ಬ್ರಾಹ್ಮಣರು ಮತ್ತು ಗೆಜ್ಜೆಗಾರ ಸಮಾಜದವರು ವಿಶ್ವಕರ್ಮ ಜಾತಿಗೆ ಸಂಬಂಧಪಡದೆ ಸಂಪ್ರದಾಯ ಆಚಾರವಿಚಾರಗಳಲ್ಲಿ ವ್ಯತ್ಯಾಸವಿರುವುದರಿಂದ ಇವರುಗಳನ್ನು ವಿಶ್ವಕರ್ಮ ಸಮಾಜದಿಂದ ಬೇರ್ಪಡಿಸಿ ಹಿಂದುಳಿದ ವರ್ಗದ 103 ಜಾತಿಗಳಲ್ಲಿ ಪ್ರತ್ಯೇಕವಾಗಿ ಗುರುತಿಸುವ ಕುರಿತು.**

**ಹೇಳಿಕೆ:**

ಮೊದಲನೇ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾಗಿದ್ದ ಶ್ರೀ ಎಲ್.ಜಿ. ಹಾವನೂರುರವರು ಸಮುದಾಯಗಳ ಶೈಕ್ಷಣಿಕ ಮತ್ತು ಉದ್ಯೋಗದ ಮಾಹಿತಿಯನುಸಾರವಾಗಿ ಹಾಗೂ ಆಯಾ ಸಮುದಾಯಗಳ ಆರ್ಥಿಕ ಮತ್ತು ವೃತ್ತಿ ಆಧಾರಿತ ಹಿಂದುಳಿದಿರುವಿಕೆಯನ್ನು ಪರಿಗಣನೆಗೆ ತೆಗೆದುಕೊಂಡು ಹಿಂದುಳಿದ ವರ್ಗಗಳನ್ನಾಗಿ ವಿಂಗಡಿಸಿ ಸರ್ಕಾರಕ್ಕೆ ಸಲಹೆಯನ್ನು ನೀಡಿದ್ದು, ಸದರಿಯವರ ಅವಧಿಯಲ್ಲಿ ವಿಶ್ವಕರ್ಮ ಸಮುದಾಯದ ಕುಲಶಾಸ್ತ್ರೀಯ ಅಧ್ಯಯನವನ್ನು ಕೈಗೊಂಡಿರುವುದಿಲ್ಲ.

ಪ್ರಸ್ತುತ ಸರ್ಕಾರದ ಆದೇಶ ಸಂಖ್ಯೆ: ಸಕಇ 225 ಬಿಸಿಎ 2000 ದಿನಾಂಕ: 30.03.2002 ರ ಆದೇಶದಲ್ಲಿ ದೈವಜ್ಞ ಬ್ರಾಹ್ಮಣರು ಮತ್ತು ಗೆಜ್ಜೆಗಾರ ಸಮುದಾಯದವರನ್ನು ಹಿಂದುಳಿದ ವರ್ಗಗಳ ಪಟ್ಟಿಯ ಪ್ರವರ್ಗ-2ಎ ರ ಕ್ರಮಸಂಖ್ಯೆ: 11 (ಎನ್) ಹಾಗೂ 11 (ಒ) ರಲ್ಲಿ ಸೇರ್ಪಡೆಗೊಳಿಸಿ ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿಯನ್ನು ಕಲ್ಪಿಸಿ ಆದೇಶಿಸಲಾಗಿರುತ್ತದೆ. ಆದಾಗ್ಯೂ ದೈವಜ್ಞ ಬ್ರಾಹ್ಮಣ ಸಮಾಜದವರು ಮತ್ತು ಗೆಜ್ಜೆಗಾರ ಸಮುದಾಯದವರು ವಿಶ್ವಕರ್ಮ ಸಮುದಾಯದಿಂದ ಬೇರ್ಪಡಿಸುವಂತೆ ಮನವಿಯನ್ನು ಸಲ್ಲಿಸಿದಲ್ಲಿ ಆಯೋಗದಿಂದ ಈ ಬಗ್ಗೆ ಬಹಿರಂಗ ವಿಚಾರಣೆ ಏರ್ಪಡಿಸಿ, ಬಹಿರಂಗ ವಿಚಾರಣೆಯಲ್ಲಿ ಕಂಡುಬಂದ ಅಂಶಗಳನ್ನು ಆಯೋಗವು ಸರ್ಕಾರಕ್ಕೆ ಸಲ್ಲಿಸಿದ ನಂತರ ಈ ಬಗ್ಗೆ ಪರಿಶೀಲಿಸಲಾಗುವುದು

**ಸಂಖ್ಯೆ**: ಇ-ಹಿಂವಕ 209 ಬಿಸಿಎ 2023

**(ಶಿವರಾಜ ಎಸ್. ತಂಗಡಗಿ)**
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು